**(ಇಂದು ದಿಃ 30-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. RSB ವಕೀಲರಿಂದಃ-**

ದಿನಾಂಕ 21.12.2023 ರಂದು ವಾದಿ ಮತ್ತು ಪ್ರತಿವಾದಿ ಅಗ್ರೀಮೆಂಟ್ ಮಾಡಿಕೊಳ್ಳುವ ಸಲುವಾಗಿ ನನ್ನ ಬಳಿ ಬಂದಿದ್ದರು. ಪ್ರತಿವಾದಿ ಹೆಸರು ಅನೀಲ್ ಕುಮಾರ್, ವಾದಿ ಹೆಸರು ಮೋಹನ್ ರಡ್ಡಿ. ಅವರ ಜೊತೆ ವಾದಿ ಹೆಂಡತಿ ಮತ್ತು ಅನಂತಯ್ಯ ಮತ್ತು ಮಾಣೀಕ ರಡ್ಡಿ ಸಾಕ್ಷಿದಾರರು ಬಂದಿದ್ದರು. 3 ಸರ್ವೇ ನಂಬರಗಳಲ್ಲಿ ಒಟ್ಟು 2 ಎಕರೆ 1 ಗುಂಟೆ ಜಮೀನು ಇದ್ದು, ಅದನ್ನು ಮಾರಾಟ ಮಾಡುತ್ತಿದ್ದೇನೆ ಎಂದು ಪ್ರತಿವಾದಿ ಹೇಳಿದರು. ಅವುಗಳ ಸರ್ವೇ ನಂಬರ 56/14, 30 ಗುಂಟೆ , 56/20 , 10 ಗುಂಟೆ ಮತ್ತು 56/21, 1 ಎಕರೆ 1 ಗುಂಟೆ. ಅಗ್ರೀಮೆಂಟನ್ನು ಟೈಪ್ ಮಾಡಿಸಿದ ನಂತರ ಅದರಲ್ಲಿ ಒಂದು ಸರ್ವೇ ನಂಬರ ಬಿಟ್ಟುರುವುದು ಮತ್ತು ಒಂದು ಬದಿಯ ಚೆಕ್ ಬಂದಿ ತಪ್ಪು ಆಗಿದ್ದು, ಸದರಿ ಸರ್ವೇ ನಂಬರ ಸೇರಿಸಿ ಪೆನ್ನಿನಿಂದ ತಿದ್ದುಪಡಿ ಮಾಡಿದ್ದೇನೆ. ಅದೇ ದಿನ ತಿದ್ದು ಪಡಿ ಮಾಡಿದ್ದೇನೆ. ಇನ್ನೊಂದು ಪ್ರಿಂಟ್ ತೆಗೆದುಕೊಳ್ಳಬಹುದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸಂಜೆ ಆಗಿತ್ತು ಕಾರಣ ಇನ್ನೊಂದು ಪ್ರಿಂಟ್ ಪಡೆದುಕೊಂಡಿಲ್ಲ ಎಂದು ಹೇಳುತ್ತಾರೆ. ಶುದ್ಧ ಕ್ರಯ ಪತ್ರದಲ್ಲಿ ತಿದ್ದುಪಡಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ತಿದ್ದು ಪಡಿ ಯಾದ ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲಿ ತಿದ್ದುಪಡಿ ಆಗುತ್ತದೆ ಅಲ್ಲಿ ಎರಡು ಪಾರ್ಟಿ ಸಹಿ ಪಡೆಯಬೇಕು ಎಂದರೆ ಸರಿ . ಸಾಕ್ಷಿ ಮುಂದುವರೆದು ಪಕ್ಕದಲ್ಲಿ ಸಹಿ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಅಗ್ರೀಮೆಂಟ್ ನಲ್ಲಿ ಕ್ರಯದ ಹಣ ತಪ್ಪಾಗಿ ನಮೂದಾದರೆ ಎನಂತೀರೀ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಪ್ರಿಂಟ್ ಪಡೆದ ಮೇಲೆ ತಪ್ಪಾಗಿದ್ದು ಗೊತ್ತಾಗಿದೆ ತಿದ್ದುಪಡಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಎರಡನೇ ಪುಟದಲ್ಲಿ ತಿದ್ದುಪಡಿ ಮಾಡಿದ ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿ ಸಹಿ ಪಡೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಕ್ಕದಲ್ಲಿ ಸಹಿ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಸೇಡಂ - ಹೈದ್ರಾಬಾದ್ ಎಂದು ತಿದ್ದು ಪಡಿ ಮಾಡಿದ ಜಾಗದಲ್ಲಿ ಕೂಡ ವಾದಿ ಮತ್ತು ಪ್ರತಿವಾದಿ ಸಹಿ ಪಡೆದಿಲ್ಲ, ಸಾಕ್ಷಿ ಮುಂದುವರೆದು ತಿದ್ದುಪಡಿಗಳು ಒಂದೇ ಪುಟದಲ್ಲಿದ್ದು ಕಾರಣ ಒಂದೇ ಬಾರಿ ಸಹಿ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ.

OS No. 46/2024

PW-4

ನಿಪಿ-1 ಅನೂರ್ಜಿತ ಒಪ್ಪಂದ ಎಂದರೆ ಸರಿಯಲ್ಲ, ನಿಪಿ-1 ಕ್ಕೆ ಪ್ರತಿವಾದಿಯ ಹೆಂಡತಿಯ ಸಹಿ ಪಡೆದಿಲ್ಲ ಎಂದರೆ ನನಗೆ ನೆನಪಿಲ್ಲ, ಪ್ರತಿವಾದಿಗೆ ವಾದಿ ಕೊಟ್ಟ ಚೆಕ್ ನಂಬರ ಗೊತ್ತಿಲ್ಲ, ವಾದಿ ದಿನಾಂಕ 02.12.2023 ರಂದು ಪ್ರತಿವಾದಿ ಜೊತೆ ಅಗ್ರೀಮೆಂಟ ಮಾಡಿಕೊಂಡಿದ್ದರು, ಸದರಿ ವ್ಯವಹಾರದ ಹಣ ಕೋಡುತ್ತೇನೆ ಎಂದ ಪ್ರತಿವಾದಿಯನ್ನು ಕರೆಯಿಸಿ ಕಡಿಮೆ ಮೊತ್ತಕ್ಕೆ ಇನ್ನೊಂದು ಅಗ್ರೀಮೆಂಟ್ ನ್ನು ವಾದಿ ಮಾಡಿಸಿಕೊಂಡಿದ್ದಾರೆ ಎಂದರೆ ದಿನಾಂಕ 02.12.2023 ರ ಅಗ್ರೀಮೆಂಟ್ ಬಗ್ಗೆ ನನಗೆ ಗೊತ್ತಿಲ್ಲ, ಎರಡು ಅಗ್ರೀಮೆಂಟ್ ಗಳ ಜೆರಾಕ್ಸಗಳನ್ನು ಒಂದೇ ದಿನ ಪ್ರತಿವಾದಿಗೆ ಕೊಟ್ಟೇವು ಎಂದರೆ ಸರಿಯಲ್ಲ, ನಿಪಿ-1 ರಲ್ಲಿ ಅಳತೆ ಹೆಚ್ಚು ಕಡಿಮೆ ಮಾಡಿಕೊಳ್ಳುವುದು ಎಂದು ಉಲ್ಲೇಖ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಒಪ್ಪಿ ಕೊಂಡಿದ್ದಾರೆ ಎಂದು ಹೇಳುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**